ನಿಮ್ಮೊಡನೆ

# ನಾಳೆಗಳ ಬಗೆಗೆ ಭರವಸೆ ತುಂಬುವ ಸವಾಲು ಸರ್ಕಾರದ ಮುಂದಿದೆ

**ಕೊರೊನಾ ಕಾಲಿಟ್ಟ ನಂತರ ಆರ್ಥಿಕತೆಗೆ ದೊಡ್ಡ ಹೊಡೆತ ಬಿದ್ದಿದೆ. ಅದರ ಜೊತೆಗೆ ಅಕ್ಕಿ–ಬೇಳೆ, ಅಡುಗೆ ಎಣ್ಣೆಯಿಂದ ಹಿಡಿದು ದೈನಂದಿನ ಬಳಕೆಗೆ ಬೇಕಾದ ವಸ್ತುಗಳ ದರ ಗಗನಮುಖಿಯಾಗಿದೆ. ಹಣದುಬ್ಬರಕ್ಕೆ ಮತ್ತಷ್ಟು ಇಂಬು ಕೊಡುವಂತೆ ಪೆಟ್ರೋಲ್, ಡೀಸೆಲ್ ದರದಲ್ಲಿ ನಿರಂತರ ಹೆಚ್ಚಳ ಆಗುತ್ತಿದೆ. ಬೆಲೆ ಏರಿಕೆಯ ವಿದ್ಯಮಾನಗಳನ್ನು ನೋಡುತ್ತ ಸರ್ಕಾರ ಕೈಕಟ್ಟಿ ಕುಳಿತಿದೆ!**

ದೇಶದಲ್ಲಿ ಕೋವಿಡ್ ಅಲೆಯ ತೀವ್ರತೆ ತಗ್ಗತೊಡಗಿದೆ. ವಾರ ಒಪ್ಪೊತ್ತಿನಲ್ಲಿ ಈ ಸಾಂಕ್ರಾಮಿಕವು ಪೂರ್ತಿ ನಿಯಂತ್ರಣಕ್ಕೆ ಒಳಪಡುವ ಭರವಸೆ ಮೂಡಿದೆ. ಅದರ ಬೆನ್ನಿಗೇ ಲಾಕ್‌ಡೌನ್ ನಿರ್ಬಂಧಗಳು ಕೂಡ ಸಡಿಲಗೊಳ್ಳಬಹುದು. ಆದರೆ, ಆರೋಗ್ಯ ಬಿಕ್ಕಟ್ಟಿನಿಂದ ಆರ್ಥಿಕತೆಗೆ ಆಗಿರುವ ಗಾಯ ಮಾಯಲು ಬಹಳ ದಿನ ಬೇಕಾಗುತ್ತದೆ. ಆರ್ಥಿಕತೆಯ ಆರೋಗ್ಯ ಇಂತಿಷ್ಟೇ ಅವಧಿಯಲ್ಲಿ ಸುಧಾರಿಸಬಹುದು ಅಂತ ಭವಿಷ್ಯ ನುಡಿಯುವ ಸ್ಥಿತಿಯಲ್ಲಿ ಯಾರೂ ಇಲ್ಲ. ಪರಿಣತಿ– ಲೆಕ್ಕಾಚಾರಗಳಿಗೆ ಎಟುಕದ ಮಹಾ ಬಿಕ್ಕಟ್ಟು ಹೆಬ್ಬಂಡೆಯಂತೆ ಎದುರಿಗೆ ನಿಂತಿರುವುದೇ ಇದಕ್ಕೆ ಕಾರಣ.

ಕೊರೊನಾ ಕಾಲಿಟ್ಟ ನಂತರದ ಒಂದೂಕಾಲು ವರ್ಷದ ಅವಧಿಯಲ್ಲಿ ಆರ್ಥಿಕತೆಗೆ ಬಿದ್ದಿರುವ ಹೊಡೆತ ಅಂತಹುದು. ಉದ್ಯೋಗ, ವಹಿವಾಟು, ಬೇಡಿಕೆ, ಉತ್ಪಾದಕತೆ... ಎಲ್ಲ ನೆಲೆಯಲ್ಲೂ ‘ನಷ್ಟ’. ಆ ಕ್ಷೇತ್ರ ಈ ಕ್ಷೇತ್ರ ಎಂಬ ಭೇದವಿಲ್ಲದೆ ಬಹುಪಾಲು ಕ್ಷೇತ್ರಗಳಿಗೆ ಬರೆ ಎಳೆದಿದೆ ಕೊರೊನಾ. ತೀವ್ರತೆಯಲ್ಲಿ ತುಸು ಹೆಚ್ಚು–ಕಡಿಮೆ ಇದ್ದಿರಬಹುದಾದರೂ ನಷ್ಟದ ಈ ಯಾದಿಯಿಂದ ಹೊರಗುಳಿದ ಕ್ಷೇತ್ರಗಳ ಸಂಖ್ಯೆ ತೀರಾ ಕಡಿಮೆ.

ಬಿಕ್ಕಟ್ಟು ಶಮನಗೊಂಡ ಬಳಿಕ ಆರ್ಥಿಕ ಪುನಶ್ಚೇತನವು ಸಾಮಾನ್ಯವಾಗಿ ಹೂಡಿಕೆಗಿಂತಲೂ ಮಿಗಿಲಾಗಿ ಬೇಡಿಕೆ ಹೆಚ್ಚಳದ ಮೂಲಕ ಆಗುತ್ತದೆ. ಆರ್ಥಿಕ ಬೆಳವಣಿಗೆ ಸುಸ್ಥಿರವಾಗಬೇಕು ಎಂದಾದರೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿರುವುದು ಇದೇ ನೆಲೆಯಲ್ಲಿ. ಅಂದರೆ ಸಾರ್ವಜನಿಕರು ಮಾರುಕಟ್ಟೆಗೆ ಬಂದು ವಸ್ತು–ಉತ್ಪನ್ನಗಳನ್ನು ಖರೀದಿಸಬೇಕು. ಜೊತೆಗೆ ಹೂಡಿಕೆಯೂ ಹೆಚ್ಚಬೇಕು. ಹೂಡಿಕೆಯು ಬೇಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ ಎಂದು ರಿಸರ್ವ್ ಬ್ಯಾಂಕ್ ತನ್ನ ವರದಿಯಲ್ಲಿ ಹೇಳಿದೆ.

ಆರ್ಥಿಕ ಪುನಶ್ಚೇತನವು ಬೇಡಿಕೆ ಮತ್ತು ಹೂಡಿಕೆಯ ಹೆಚ್ಚಳವನ್ನು ಅವಲಂಬಿಸಿದೆ ಎಂದು ಆರ್‌ಬಿಐ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ದಾಖಲಿಸಿದೆ. ಆದರೆ, ಅದನ್ನು ಸಾಧ್ಯವಾಗಿಸುವ ಸಾಮರ್ಥ್ಯ ಇರುವುದು ಸರ್ಕಾರಕ್ಕೆ. ಹಣಕಾಸು ಇಲಾಖೆಯ ಕಾಳಜಿ, ದೂರದೃಷ್ಟಿ, ಎಲ್ಲರನ್ನೂ ಒಳಗೊಳ್ಳುವಂತಹ ಕ್ರಿಯಾಯೋಜನೆಗಳು, ಮನೋಬಲ ಮತ್ತು ಇಚ್ಛಾಶಕ್ತಿಯ ಮೇಲೆ ಅದು ನಿಂತಿದೆ.

ಜನಸಾಮಾನ್ಯರು ಮೊದಲಿನಂತೆ ಕಾಸು ಬಿಚ್ಚಬೇಕಾದರೆ ಮೊದಲು ಅವರಲ್ಲಿ ವಿಶ್ವಾಸ ಮೂಡಬೇಕು. ನಾಳೆಗಳ ಬಗೆಗೆ ನಂಬಿಕೆ ಕುದುರಬೇಕು. ನಂಬಿಕೆ ಕುದುರಿಸುವಂತಹ ಕೆಲಸ ಸರ್ಕಾರದ ಕಡೆಯಿಂದ ಆಗಬೇಕು. ಜನರ ಕೈಯಲ್ಲಿ ಕಾಸು ಓಡಾಡಿದರೆ, ನಾಳೆಗಳ ಬಗೆಗೆ ಆತಂಕ ನಿವಾರಣೆಯಾದರೆ ಮಾರುಕಟ್ಟೆಗೆ ತಾನಾಗಿಯೇ ಹೊಳಪು ಮೂಡುತ್ತದೆ. ವಸ್ತು–ಉತ್ಪನ್ನಗಳಿಗೆ ಬೇಡಿಕೆ ಕ್ರಮೇಣ ಹೆಚ್ಚತೊಡಗುತ್ತದೆ. ಆರ್ಥಿಕತೆಯ ಬಂಡಿ ಸರಾಗವಾಗಿ ಓಡಲು ಬೇಕಾದ ಕೀಲೆಣ್ಣೆ ಸಿಗುತ್ತದೆ.

ದುರದೃಷ್ಟದ ಸಂಗತಿಯೆಂದರೆ, ಜನರ ಕೈಯಲ್ಲಿ ಕಾಸು ಉಳಿಸುವ ಬೆಳವಣಿಗೆಗಳಿಗಿಂತ, ಅವರ ಕಿಸೆ ಖಾಲಿಯಾಗಿಸುವ ವಿದ್ಯಮಾನಗಳೇ ಹೆಚ್ಚಿಗೆ ನಡೆಯುತ್ತಿವೆ. ಅಕ್ಕಿ–ಬೇಳೆ, ಅಡುಗೆ ಎಣ್ಣೆಯಿಂದ ಹಿಡಿದು ದೈನಂದಿನ ಬಳಕೆಗೆ ಬೇಕಾದ ವಸ್ತುಗಳ ದರ ಗಗನಮುಖಿಯಾಗಿದೆ. ಜೊತೆಗೆ ಹಣದುಬ್ಬರಕ್ಕೆ ಮತ್ತಷ್ಟು ಇಂಬು ಕೊಡುವಂತೆ ಪೆಟ್ರೋಲ್, ಡೀಸೆಲ್ ದರದಲ್ಲಿ ನಿರಂತರ ಹೆಚ್ಚಳ ಆಗುತ್ತಿದೆ. ಇಂತಹ ವಿಷಮ ಸ್ಥಿತಿಯಲ್ಲೂ ಬೆಲೆ ಏರಿಕೆಯ ವಿದ್ಯಮಾನಗಳನ್ನು ನೋಡುತ್ತ ಸರ್ಕಾರ ಕೈಕಟ್ಟಿ ಕುಳಿತಿದೆ!

ಕೋವಿಡ್ ಎರಡನೇ ಅಲೆಯ ಸಂಕಷ್ಟಕ್ಕೆ ಸಿಲುಕಿರುವ ಸಮುದಾಯಗಳಿಗೆ ರಾಜ್ಯ ಸರ್ಕಾರವು ₹ 1,250 ಕೋಟಿ ಮೊತ್ತದ ಪರಿಹಾರ ಪ್ಯಾಕೇಜ್ ಘೋಷಿಸಿದೆ. ಕೃಷಿಕರು, ಕಟ್ಟಡ ಕಾರ್ಮಿಕರು, ಆಟೊ– ಟ್ಯಾಕ್ಸಿ ಚಾಲಕರು, ಬೀದಿ ಬದಿಯ ವ್ಯಾಪಾರಿಗಳು, ಶ್ರಮಿಕರು ಮತ್ತು ಕಲಾವಿದರಿಗೆ ಇದರಿಂದ ನೆರವಾಗಲಿದೆ ಎಂದು ಸರ್ಕಾರ ಹೇಳಿದೆ. ಲಕ್ಷಾಂತರ ಕುಟುಂಬಗಳ ಬದುಕು ಮೂರಾಬಟ್ಟೆಯಾಗಿರುವ ಈ ಸನ್ನಿವೇಶದಲ್ಲಿ ಇಂತಹ ಪರಿಹಾರ ಪ್ಯಾಕೇಜ್‌ಗಳು ಯಾರ ಕಷ್ಟವನ್ನೂ ನೀಗಲಾರವು. ಕೆಲವರಿಗೆ ತಕ್ಷಣಕ್ಕೆ ಒಂದಷ್ಟು ಸಮಾಧಾನ ತರಬಹುದು ಅಷ್ಟೆ. ಇಂತಹ ಪರಿಹಾರಗಳನ್ನು ಒಂದು ತುರ್ತು ಕ್ರಮವಾಗಿಯಷ್ಟೇ ಪರಿಭಾವಿಸಬೇಕು.

ಸಾಂಕ್ರಾಮಿಕದ ಈ ಎರಡನೇ ಅಲೆಯ ಬಿಸಿ ಗ್ರಾಮೀಣ ಭಾರತಕ್ಕೂ ಜೋರಾಗಿಯೇ ತಟ್ಟಿದೆ. ಇದರ ಬಾಧೆಗೆ ಒಳಗಾದ ಹಳ್ಳಿಗಾಡಿನ ಕುಟುಂಬಗಳು ತತ್ತರಿಸಿವೆ. ಜೊತೆಗೆ ತಾವು ಬೆಳೆದ ಬೆಳೆಗೆ ಮಾರುಕಟ್ಟೆ ಇಲ್ಲದೆ ಅವರು ಕಂಗಾಲಾಗಿ ಕೂತಿದ್ದಾರೆ. ಸಾಲ ಬೆನ್ನೇರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹೀಗಾಗಿ ಮಾರುಕಟ್ಟೆಗೆ ಚೈತನ್ಯ ತುಂಬುವ ಶಕ್ತಿ ಅವರಲ್ಲೂ ಉಳಿದಿಲ್ಲ. ಜನರಲ್ಲಿ ಭದ್ರತೆಯ ಭಾವ ಚಿಗುರಿಸಿ, ನಾಳೆಗಳ ಬಗೆಗೆ ಭರವಸೆ ತುಂಬುವ ಸವಾಲು ಈಗ ಸರ್ಕಾರದ ಮುಂದಿದೆ.

**■ ಎನ್. ಉದಯಕುಮಾರ್**



ಈಶ್ವರ್